ಸಹಕಾರಿ ಸಂಸ್ಥೆಗಳಿಂದ ರೈತರು ಪಡೆದುಕೊಂಡಿರುವ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ

1) Whether there is proposal before the Government for consideration of waiver of the principal and interest of the farmers who have borrowed loans from the Cooperative institutions ?

2) If so. wheter the State Governmet has paid the interest subsidy to the cooperative institutions under interest waiver scheme announced by the Government during the previous year?

3) If so, what is the amount paid to cach District Central cooperative Bank and other Cooperative Institutions and what is the amount to be paid?

4) Whether it has to the come to the notice of the Government that the Cooperative Institutions are put to financial hardship as the Government is yet to release crores of rupees to Cooperative Institutions?

5) If so, what is the course of action before the Government ?

Sri H. D. Kumara swamy (C. M.)

1) There is no proposal for waiver of principal. but, interest and Penal interst on the short-term, medium-term and long-term loans outstanding as on 31.03.2004 has been written off if the farmers repay the principal on the said loans during the periond from 01.03.2005 to 31.03.2005 to the respective cooperative credit societies/banks and sanction has been accorded to reimburse the related amount of interest and penal interest to the respective cooperative credit societies / banks.

2) Rs. 450.00 crores provided for in the budget 2005-06 has been relesed.

3) The details of the amount released are fursished in the Annexure.

4) The Government is aware of the fact interest and penal interest waiver amount is due for relese to the Cooperative institutions.

5) The remaining subsidy amount will be released in due course.

ಮಾನ್ಯ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ವಿಧಾನಸಭಾ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ: 111ಕ್ಕೆ ಅನುಬಂಧ:

ಬಡ್ಡಿ ಮತ್ತು ದಂಡದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿರುವ ಹಾಗೂ ಬಿಡುಗಡೆಗೆ ಹಾಕಿ ಇರುವ ಮೊತ್ತದ ಅಂದಾಜು ವಿವರಗಳು:

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲಾ ಬ್ಯಾಂಕ್ / ಸಹಕಾರಿ ಸಂಸ್ಥೆಗಳು	ಸರ್ಕಾರದಿಂದ ಬಿಡುಗಡೆ ಮಾಡಿರುವ ಬಡ್ಡಿ, ದಂಡದ ಬಡ್ಡಿ ಸಹಾಯ ಧನದ ಮೊತ್ತ	ಬಿಡುಗಡೆಗೆ ಬಾಕಿ ಇರುವ ಮೊತ್ತ
1	ಬೆಂಗಳೂರು	2196.26	1058.16
2	ಕೋಲಾರ	1863.94	948.00
3	ಚಿತ್ರದುರ್ಗ	732.70	–
4	ಶಿವಮೊಗ್ಗ	1004.60	1344.44
5	ದಾವಣಗೆರೆ	1471.76	2937.24
6	ತುಮಕೂರು	1100.00	978.45
7	ಮೈಸೂರು	1100.00	1023.36
8	ಮಂಡ್ಯ	1550.00	2649.03
9	ಹಾಸನ	1100.00	911.28
10	ದಕ್ಷಿಣ ಕನ್ನಡ	1100.00	1414.36
11	ಕೊಡಗು	1550.00	2391.31
12	ಚಿಕ್ಕಮಗಳೂರು	2100.00	3065.94
13	ಬೆಳಗಾಂ	3750.00	8895.91
14	ಬಿಜಾಪುರ	972.78	2804.46
15	ಬಾಗಲಕೋಟೆ	331.43	1850.25

16	ಧಾರವಾಡ	3553.81	1876.25
17	ಕೆನೆರಾ–ಶಿರ್ಸಿ	600.00	–
18	ಗುಲ್ಬರ್ಗಾ	841.25	289.02
19	ಬೀದರ್	1400.00	4498.89
20	ರಾಯಚೂರ್	820.54	10.00
21	ಬಳ್ಳಾರಿ	1000.00	946.49
22	ವಾಣಿಜ್ಯ ಬ್ಯಾಂಕ್ ಅಭ್ಯರ್ಪಿಸಲ್ಪಟ್ಟಿರುವ ಪ್ಯಾಕ್ಸ್‌ಗಳಿಗೆ	1360.70	376.30
23	ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್	13500.00	17313.00
	ಒಟ್ಟು	44972.77	57582.14

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಇಲ್ಲಿ 2005–06ನೇ ಸಾಲಿನಲ್ಲಿ 400 ಕೋಟಿ ರೂಪಾಯಿಗಳನ್ನು ಇಟ್ಟರೂ ಕೂಡ ಇನ್ನೂ 350 ಕೋಟಿ ರೂಪಾಯಿಗಳ ಬಾಕಿ ಇತ್ತು. ಈ 350 ಕೋಟಿ ರೂಪಾಯಿಗಳ ಬಗ್ಗೆ ಏನೂ ಹೇಳಿಲ್ಲ. ಇದು ಒಂದೊಂದು ವರ್ಷಗಳು ಹೋದರೆ, ಇಡೀ ಸಹಕಾರಿ ಬ್ಯಾಂಕ್‌ಗಳು ಕೃಷಿ ಸಾಲವನ್ನು ಕೊಡುವುದಕ್ಕೆ ಭಯಂಕರ ತೊಂದರೆಯಾಗುತ್ತದೆ. ಎಲ್ಲಾ ಬ್ಯಾಂಕ್‌ಗಳನ್ನು ಕ್ಲೋಸ್ ಮಾಡಬೇಕಾಗುತ್ತದೆ. ಇದರ ಬಗ್ಗೆ ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ? ಮತ್ತೊಂದು ವಿಷಯವೇನೆಂದರೆ ತಾವು ಶೇ.4 ರಂತೆ ಬಡ್ಡಿಯನ್ನು ಮಾಡಿದ್ದೀರಿ ಸಂತೋಷ. ಆದರೆ ಈ ಸಬ್ಸಿಡಿಯನ್ನು ಯಾವಾಗ ಕೊಡುತ್ತೀರಿ, ಎಲ್ಲಿ ಎಂಬ ಬಗ್ಗೆ ಬಜೆಟ್‌ನಲ್ಲಿ ಏನೂ ಪ್ರಾವಿಜನ್ ಮಾಡಿಲ್ಲ. ಹಿಂದೆ ನಮ್ಮ ಸರ್ಕಾರ ಇದ್ದಾಗ ಶೇ.6 ರಂತೆ ಬಡ್ಡಿಯನ್ನು ಮಾಡಿದ್ದೆವು. ಆಗ 80 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದೆವು. ಈ ಸಾರಿ ತಾವು ಬಜೆಟ್‌ನಲ್ಲಿ ಏನೂ ತೋರಿಸಿಲ್ಲ ಈಗ ಶೇ.4 ರಂತೆ ಬಡ್ಡಿಗೆ ಸಾಲ ಕೊಡುತ್ತೇವೆಂದು ಹೇಳಿದ್ದೀರಿ ಆದರೆ ಬಜೆಟ್‌ನಲ್ಲಿ ಏನೂ ತೋರಿಸಿಲ್ಲ ನಾಳೆ ದಿವಸ ಈ ಬ್ಯಾಂಕ್‌ಗಳು, ಸಹಕಾರ ಸಂಘಗಳು, ಎಲ್ಲಾ ಮುಳುಗಿ ಹೋಗುತ್ತವೆ. ಎಲ್ಲಾ ರೈತರಿಗೆ ನೇರವಾಗಿ ಈ ಸಹಕಾರಿ ಬ್ಯಾಂಕ್‌ಗಳು ಸಾಲವನ್ನು ಕೊಡುವಂಥಾದ್ದು. ಬೇರೆ ಕಮರ್ಷಿಯಲ್ ಬ್ಯಾಂಕ್‌ಗಳು ಪಿಕ್ ಅಂಡ್ ಚುಸ್

ದೊಡ್ಡ ದೊಡ್ಡವರಿಗೆ ಸಾಲವನ್ನು ಕೊಡುವಂಥಾದ್ದು. ಸಹಕಾರಿ ಬ್ಯಾಂಕ್ ಎಲ್ಲರಿಗೂ ಸಾಲವನ್ನು ಕೊಡುವಂಥಾದ್ದು. ಅದಕ್ಕಾಗಿ ಈ ಬಡ್ಡಿ ಮನ್ನಾವನ್ನು ಇಮೀಡಿಯೆಟ್ ಆಗಿ ಸಬ್ಸಿಡಿ ಕೊಡವ ಬಗ್ಗೆ ಮತ್ತು 350 ಕೋಟಿ ರೂಪಾಯಿಗಳ ಬಗ್ಗೆ ತಾವು ಏನೂ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ತಾವು ಇದನ್ನು ಯಾವಾಗ ಕೊಡುತ್ತೀರಿ, ಎಂಬ ಬಗ್ಗೆ ತಾವು ಹೇಳಬೇಕು.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸರ್ಕಾರದಿಂದ ಬಿಡುಗಡೆ ಮಾಡಿರತಕ್ಕಂಥ ಬಡ್ಡಿ ಮತ್ತು ದಂಡದ ಬಡ್ಡಿ ಸಹಾಯಧನ 2005–06ರಲ್ಲಿ 450 ಕೋಟಿ ರೂಪಾಯಿಗಳು ಬಿಡುಗಡೆಯಾಗಿತ್ತು. ಮತ್ತೆ ಹಂತ ಹಂತವಾಗಿ ಈ ಬಡ್ಡಿ ಮನ್ನಾದ ಕಾರ್ಯಕ್ರಮವನ್ನು ವಿಸ್ತಾರ ಮಾಡುವುದರ ಮುಖಾಂತರ, ಸುಮಾರು 1025 ಕೋಟಿ ರೂಪಾಯಿಗಳನ್ನು ಕೊಡ ಬೇಕಾಗುತ್ತದೆ. ನಿನ್ನೆ ಬಜೆಟ್‌ನಲ್ಲಿ ಮಾನ್ಯ ಹಣಕಾಸು ಸಚಿವರು ಈ ವರ್ಷವೇ 2005–06ನೇ ಇಸವಿಯಲ್ಲಿ 400ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಪ್ರಕಟ ಮಾಡಿದ್ದಾರೆ. ಮುಂದಿನ ದಿವಸಗಳಲ್ಲಿ ಶೇ.4 ರಂತೆ ಬಡ್ಡಿ ಕೊಡುವ ವಿಷಯದಲ್ಲಿ ನಾವು ಹೊಸ ನೀತಿಯನ್ನು ತರಲು ಹೊರಟಿದ್ದೇವೆ. ಅದಕ್ಕೆ ಹಣವನ್ನು ತೊಡಗಿಸುವಂಥಾದ್ದಕ್ಕೆ ಮತ್ತೆ ಹಣವನ್ನು ಕೊಡುವಂಥಾದ್ದಕ್ಕೆ ಯಾವುದೇ ರೀತಿಯ ತೊಂದರೆಗಳು ಇಲ್ಲ. ಇವತ್ತಿನ ನಿಮ್ಮ ಪ್ರಶ್ನೆಗೆ, ನಿನ್ನೆಯ ಉತ್ತರ ಸಿಕ್ಕಿದೆಯೆಂದು ನಾನು ಹೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ನೋಡಿದೆ, ಕೆಲವಕ್ಕೆ ಉತ್ತರ ಸಿಕ್ಕಿದೆ, ಬಜೆಟ್‌ನಲ್ಲಿ ಸಬ್ಸಿಡಿಗೆ ಪ್ರಾವಿಜನ್ ಮಾಡಬೇಕಾಗಿತ್ತು, ಏನೂ ಪ್ರಾವಿಜನ್ ಮಾಡಿಲ್ಲ. ಅಂದಮೇಲೆ ಯಾವ ರೀತಿಯಲ್ಲಿ ಸಾಲ ಸಿಗುತ್ತದೆಂಬ ಬಗ್ಗೆ ತಿಳಿಯುವುದಿಲ್ಲ. ಬ್ಯಾಂಕ್‌ಗಳ ಸ್ಥಿತಿ ಗಂಭೀರವಾಗುತ್ತದೆ. ಅದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಬಾರ್ಡ್‌ನವರು ಬಡ್ಡಿ ಮನ್ನಾ ಸಹಾಯ ಸಾಲವನ್ನು ನಿಲ್ಲಿಸಿಬಿಡುತ್ತಾರೆ. ಸರ್ಕಾರ ಯಾವತ್ತಿನವರೆಗೆ ಈ ಸಾಲವನ್ನು ಕೊಡಲಿಲ್ಲವೊ, ಅವತ್ತಿಗೆ ನಬಾರ್ಡ್‌ನವರು ನಿಲ್ಲಿಸಿಬಿಡುತ್ತಾರೆ. ಅವರು ಯಾವ ಸಾಲವನ್ನೂ ಕೊಡುವುದಿಲ್ಲ. ಅದಕ್ಕಾಗಿ ತಕ್ಷಣವೇ ತಾವು ಆಗಿನದ್ದು ಆಗಲೇ ಬಿಡುಗಡೆ ಮಾಡಿದರೆ, ಬ್ಯಾಂಕ್‌ಗಳು ಉಳಿಯುತ್ತವೆ, ನಬಾರ್ಡ್‌ನವರು ಕೊಡುತ್ತಾರೆ, ಇಲ್ಲದಿದ್ದರೆ ಎಲ್ಲಾ ಬ್ಯಾಂಕ್‌ಗಳು ಮುಚ್ಚುವ ಪರಿಸ್ಥಿತಿ ಬರುತ್ತದೆ. ಅದಕ್ಕೆ ನಾನು ತಮಗೆ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ಉತ್ತರ ಸಿಕ್ಕಿದೆ ಇಲ್ಲವೆಂದು ಅಲ್ಲ, ಬಜೆಟ್‌ನಲ್ಲಿ ತೋರಿಸಿದ್ದರೆ ನಾನು ಕೇಳುತ್ತಿರಲಿಲ್ಲ ಬಜೆಟ್‌ನಲ್ಲಿ 80 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೆವು ಆದರೆ ನೀವು ಅದನ್ನು ತೋರಿಸಿಲ್ಲ. ಈಗ

ಇನ್ನು 350 ಕೋಟಿ ರೂಪಾಯಿಗಳು ಉಳಿಯತಕ್ಕಂಥದ್ದು ಪಿಎಲ್‌ಡಿ ಬ್ಯಾಂಕ್ ಇದೆ, ಬೇರೆ ಬೇರೆ ಬ್ಯಾಂಕ್‌ಗಳದ್ದು ಇವೆ, ಆ ಬ್ಯಾಂಕ್‌ಗಳ ದುಡ್ಡು ತೋರಿಸಿಲ್ಲ ಅಂದಮೇಲೆ ಯಾವಾಗ ಕೊಡುತ್ತೀರಿ? ಅದನ್ನು ತಾವು ತೋರಿಸಬೇಕಾಗಿತ್ತು. ನೀವು ಬೇಗ ಹಣವನ್ನು ಬಿಡುಗಡೆ ಮಾಡಿಲ್ಲವೆಂದರೆ, ನಬಾರ್ಡ್‌ನದು ತೊಂದರೆಯಗುತ್ತದೆ. ಆ ಪರಿಸ್ಥಿತಿಯನ್ನು ತಾವು ಹೇಳಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಕಳೆದ ಬಜೆಟ್‌ನಲ್ಲಿ ಶೇ.6ರ ಬಡ್ಡಿಯಂತೆ 96 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದರು. ಈ ಸಲ ಶೇ.4 ರಂತೆ ಬಡ್ಡಿಗೆ ಮಾಡಿದ್ದಾರೆ. ಆದರೆ ಬಜೆಟ್‌ನಲ್ಲಿ ಹಣ ಎಷ್ಟು ಎಂಬ ಬಗ್ಗೆ ಪ್ರಾವಿಜನ್ ಇಲ್ಲ. ಇದು ಏನಾಗುತ್ತದೆಂದರೆ ಶೇ.4ರ ಬಡ್ಡಿಯಂತೆ ರೈತರು ಮುಂದೆ ಬಂದಾಗ, ನೀವು ಹಣ ಇಷ್ಟು ಎಂದು ಅಲ್ಲಿಗೆ ಕೊಡದೇ ಇದ್ದರೆ, ರೈತರಿಗೆ ಸಾಲ ಸಿಗುವುದಿಲ್ಲ. ಈಗಾಗಲೇ ಕೆಲವು ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ಬಡ್ಡಿ ಮನ್ನಾ ಮಾಡಿರುವುದನ್ನು ನೀವು ದುಡ್ಡು ಕಟ್ಟದೇ ಇರುವುದರಿಂದ, ಈ ದುಡ್ಡು ಬರುವವರೆಗೂ ಸಾಲವನ್ನು ಕೊಡುವುದಿಲ್ಲವೆಂದು ನಮ್ಮ ಪಿಎಲ್‌ಡಿ ಬ್ಯಾಂಕ್‌ನಲ್ಲೇ ಮಾತನಾಡುತ್ತಿದ್ದಾರೆ. ಆದುದರಿಂದ ಇದಕ್ಕೆ ಸರಿಯಾದಂತಹ ಹಣವನ್ನು ಇಡದೇ ಇದ್ದರೆ, ನೀವು ಹೇಳುವ ಶೇ.4ರ ಬಡ್ಡಿ ಎಂಬುದು ಬರೀ ಬಂಕಮ್ ಆಗುತ್ತದೆ ಇದು ಪ್ರಚಾರಕ್ಕೆ ಆಗುತ್ತದೆ. ಇದಕ್ಕೆ ನಿರ್ದಿಷ್ಟವಾದಂತಹ ಹಣವನ್ನು ಇಡದೇ ಇದ್ದರೆ, ಇದು ಉಪಯೋಗವಾಗುವುದಿಲ್ಲ. ಈಗ ಮಾನ್ಯ ವಿತ್ತಮಂತ್ರಿಯವರು ಇಲ್ಲಿ ಇಲ್ಲ; ಅವರು ಇದ್ದಿದ್ದರೆ ನಾನು ಹೇಳಬೇಕೆಂದು ಇದ್ದೆ. ಇವರು ಬಜೆಟ್‌ನಲ್ಲಿ ಇಷ್ಟು ಹಣ ಶೇ.4 ಬಡಿ ಆಗಿರುವುದು ಎಂದು ಹೇಳಬೇಕು ಕಳದ ಬಾರಿ ಶೇ.6ರಂತೆ ಇತ್ತು, 96 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈ ಸಾರಿ ಅದು ಎಷ್ಟಾಗುತ್ತದೆ, 120 ಕೋಟಿ ರೂಪಾಯಿಗಳಾಗುತ್ತದೋ, 150 ಕೋಟಿ ರೂಪಾಯಿಗಳಾಗುತ್ತದೋ, ಎಷ್ಟು ಏನ್ನುವುದನ್ನು ತೋರಿಸಬೇಕು. ಇಲ್ಲದಿದ್ದರೆ, ಕೋ–ಆಪರೇಟಿವ್ ಬ್ಯಾಂಕುಗಳು ಸಾಲ ಕೊಡುವುದಿಲ್ಲ. ಹಣ ತೋರಿಸದಿದ್ದರೆ, ಇದು ಕೇವಲ ಪ್ರಚಾರ ಗಿಟ್ಟಿಸುವುದಕ್ಕಾಗಿ ಮಾಡಿರುವುದು ಏನ್ನುವ ಮಾತಾಗುತ್ತದೆ. ಇದು ಆಗಬಾರದು ತಾವು ರೈತರ ಹೆಸರಿನಲ್ಲಿ ಹೇಳಿದ್ದೀರಿ ಆದರೆ ಅದಕ್ಕೆ ಎಷ್ಟು ಹಣವಾಗುತ್ತದೆ ಏನ್ನುವುದನ್ನು ಹೇಳಿ ಅದನ್ನು ಕೊಡಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾದುದು ಏಕೆಂದರೆ, ಇದಕ್ಕಾಗಿ ಹಣ ಇಡದಿದ್ದರೆ ಇಡೀ ಸಹಕಾರಿ ವ್ಯವಸ್ಥೆಯೇ ಮುಳುಗಿ ಹೋಗುತ್ತದೆ. ಈಗಲೂ ಸಹ ಅವು ಉಳಿದಿಲ್ಲ. ಲ್ಯಾಂಡ್

ಬ್ಯಾಂಕ್‌ಗಳು, ಅಪೆಕ್ಸ್ ಬ್ಯಾಂಕ್‌ಗಳೂ ಸಹಾ ಹಾನಿಗೆ ಬಂದು ಮುಳುಗುವಂಥ ಸ್ಥಿತಿಗೆ ಬಂದಿದ್ದು, ಎಲ್ಲಾ ಡಿ.ಸಿ.ಸಿ. ಬ್ಯಾಂಕುಗಳಿಗೂ ಹಾನಿಯಾಗುತ್ತದೆ. ಇವರು ಅವುಗಳಿಗೆ ಇನ್ನೂ ತುಂಬುವುದು ಎಷ್ಟು ಉಳಿದಿದೆ ಅದನ್ನು ತುಂಬಿದರೆ ಒಳ್ಳೆಯದು ಒಟ್ಟು 449 ಕೋಟಿ ರೂಪಾಯಿಗಳನ್ನು ತುಂಬಿದ್ದಾರೆ. ಅದನ್ನು ಯಾವ ಹಂತದಲ್ಲಿ ತುಂಬಿದ್ದಾರೆ. ಎಂದು ನೋಡಿ, ಅದಕ್ಕೆ ಬಡ್ಡಿ ಎಷ್ಟಾಗಿದೆ ಏನ್ನುವ ಲೆಕ್ಕ ಹಾಕಿ. ಇನ್ನೂ ಸರ್ಕಾರ ಇವುಗಳಿಗೆ 575 ಕೋಟಿ 82 ಲಕ್ಷದ 14 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಹಂತಹಂತವಾಗಿ ಕೊಟ್ಟು ಕೊಂಡು ಹೋಗುತ್ತೇವೆ ಎಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಇದಕ್ಕೆ ಪ್ರತಿದಿವಸ ಎಷ್ಟು ಬಡ್ಡಿಯಾಗುತ್ತದೆ ಎಂದು ಲೆಕ್ಕಹಾಕಿ. ಹೀಗಾದರೆ ಆ ಸಂಸ್ಥೆಗಳು ಹೇಗೆ ಉಳಿಯಬೇಕು? ಈ ಸಂಸ್ಥೆಗಳಿಗೆ ನೀವೂ ಕೊಡುವುದಿಲ್ಲ, ಮನ್ನಾ ಮಾಡಿದ್ದೇವೆ ಎಂದು ರೈತರಿಗೂ ಹೇಳಿಬಿಟ್ಟಿರಿ ಇದರಲ್ಲಿ ನಿಮ್ಮ ಸರ್ಕಾರ, ನಮ್ಮ ಸರ್ಕಾರ ಎಂದೇನೂ ಇಲ್ಲ. ನಾವು ಇದ್ದಾಗಲೂ ಸಹ ಆರಾರು ವರ್ಷಗಳವರೆಗೆ ಕೊಟ್ಟಿದ್ದೇವೆ. ಇದು ಇರುವ ಪರಿಸ್ಥಿತಿ ಅದಕ್ಕಾಗಿ ದಯವಿಟ್ಟು ನೀವು ಈ ವಿಷಯದಲ್ಲಿ ಏನಾದರೂ ಮಾಡಬೇಕಾಗಿದ್ದರೆ, ರೈತರಿಗೆ ಒಳ್ಳೆಯದು ಆಗಬೇಕಾಗಿದ್ದರೆ, ಇದು ತಕ್ಷಣ ಪಾವತಿಯಾಗಿದ್ದರೆ ಯಾವುದೇ ಬಡ್ಡಿ ಬರುತ್ತಿರಲಿಲ್ಲ. ಆ ರೀತಿ ಬ್ಯಾಂಕಿಗೆ ಮುಂಗಡವಾಗಿ ಒಂದು ನೂರು ಕೋಟಿ ರೂಪಾಯಿಗಳನ್ನು ಜಮಾ ಇಡಿ, ಅವುಗಳು ಬಂದಬಂದಹಾಗೆ ಕೊಡುವ ವ್ಯವಸ್ಥೆ ಮಾಡಿದರೆ ಇವುಗಳು ಉಳಿಯುತ್ತವೆ, ನಿಮ್ಮ ಎಲ್ಲಾ ಸ್ಕೀಂಗಳು ಆಗುತ್ತವೆ, ರೈತರು ಉಳಿಯುತ್ತಾರೆ, ಈ ರಾಜ್ಯ ಅಭಿವೃದ್ಧಿಯಾಗುತ್ತದೆ. ಇಲ್ಲದಿದ್ದರೆ ಸಹಕಾರಿ ಸಂಸ್ಥೇಗಳು ಖಂಡಿತವಾಗಿ ಮುಳುಗಿ ಹೋಗುತ್ತವೆ. ಬಾಕಿ ಇರುವ ಈ 575 ಕೋಟಿ ರೂಪಾಯಿಗಳನು ಒನ್ ಟೈಂ ಬಿಡುಗಡೆ ಮಾಡಿಬಿಡಿ. ಅದನ್ನು ಎಂದು ಮಾಡುತ್ತೀರಿ, ಒಂದು ತಿಂಗಳಲ್ಲಿ ಮಾಡುತ್ತಿರೋ, ಎರಡು ತಿಂಗಲ್ಲಿ ಮಾಡುತ್ತೀರೋ, ಒನ್ ಟೈಂನಲ್ಲಿ ಬಿಡುಗಡೆ ಮಾಡುತ್ತೀರೋ ಏನ್ನುವುದನ್ನು ಕೂಡ ಹೇಳಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಾಕಿ ಬಿಡುಗಡೆ ಮಾಡುವುದು ಏನಿದೆ, ಅದನ್ನು ಈ ಮಾರ್ಚ್ 31ನೇ ತಾರೀಖಿನೊಳಗೆ ಬಿಡುಗಡೆ ಮಾಡಲಿಕ್ಕೆ ತಮಗೆ ಶಕ್ತಿ ಇದೆ, ಸಾಕಷ್ಟು ಹಣ ಟ್ರೆಷರಿಯಲ್ಲಿದೆ ದಯವಿಟ್ಟು ಅದನ್ನು ಬಿಡುಗಡೆ ಮಾಡಿದರೆ, ನಮ್ಮ ಹಳ್ಳಿ ಸೊಸೈಟಿಗಳು ಡಿ.ಸಿ.ಸಿ ಬ್ಯಾಂಕುಗಳಿಗೆ ಕೊಡುವ ಡಿ.ಸಿ.ಸಿ ಬ್ಯಾಂಕುಗಳು ಅಪೆಕ್ಸ್ ಬ್ಯಾಂಕುಗಳಿಗೆ ಕೊಡುವ ಬಡ್ಡಿ ಹೊರೆ ಕಡಿಮೆಯಾಗುತ್ತದೆ. ತರುವಾಯ ಅವು ರೈತರ ಸೇವೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ, ದಯವಿಟ್ಟು ಅದನ್ನು

ಇಮೀಡಿಯೆಟ್ ಮಾಡಿಸಬೇಕು. ಇದರ ಜೊತೆಗೆ ಕೆ ಸಿ ಸಿ ಬ್ಯಾಂಕಿಗೆ ತಾವು ಏನು ಪ್ರಾಮಿಸ್ ಮಾಡಿದ್ದೀರಿ. ಅದೂ ಇಮೀಡಿಯೆಟ್ ರಿಲೀಸ್ ಆಗುವ ಹಾಗೆ ಆಗಬೇಕು.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ರೈತರ ಕಷ್ಟಕ್ಕೆ ಸರ್ಕಾರ ಚಿಂತಿಸಬೇಕು ಏನ್ನುವ ವಿಷಯದಲ್ಲಿ ಸದನದ ಸದಸ್ಯರುಗಳಿಗಿರತಕ್ಕಂಥ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು, 400 ಕೋಟಿ ರೂಪಾಯಿಗಳನ್ನು 2005–06ನೇ ಸಾಲಿನಲ್ಲೇ ಕೊಡುತ್ತೇವೆ ಎಂದು ನಿನ್ನೆಯ ಬಜೆಟ್‌ನಲ್ಲಿ ಹೇಳಿದ್ದೇವೆ, ಇನ್ನೂ ಸುಮಾರು 225 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆರ್ಥಿಕ ಇಲಾಖೆಯ ಜೊತೆ ಚರ್ಚೆ ಮಾಡಿ, ಆದಷ್ಟು ಬೇಗ ಈ ಹಣವನ್ನು ಕೊಡತಕ್ಕಂಥಾದ್ದನ್ನು ಮಾಡುತ್ತೇವೆ. ಮುಂದಿನ ವರ್ಷದಿಂದ ಶೇಕಡಾ ನಾಲ್ಕರ ಬಡ್ಡಿದರದಲ್ಲಿ ರೈತರಿಗೆ ಸಾಲವನ್ನು ವ್ಯವಸ್ಥೆಯನ್ನು ನಿನ್ನೆ ನಿನ್ನೆ ಘೋಷಣೆ ಮಾಡಿದ್ದೇವೆ. ಇದಕ್ಕೆ ಹಣವನ್ನು ಇಟ್ಟಿಲ್ಲ, ಕೇವಲ ಪ್ರಚಾರಕ್ಕೋಸ್ಕರ ಮಾಡಿರುವಂಥಾದ್ದು ಏನ್ನುವ ಆತಂಕ, ಅನುಮಾನಗಳೇನಿವೆ, ಅ ಅನುಮಾನಗಳ ಅವಶ್ಯಕತೆಯಿಲ್ಲ ಈ ಅನುಮಾನವನ್ನು ನಾವು ಸದ್ಯದಲ್ಲೇ ಪರಿಹರಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ.

ಪ್ರಶ್ನೆ ಸಂಖ್ಯೆ : 9(93)

(ಪ್ರಶ್ನೆಯನ್ನು ಹಾಕಿರುವ ಮಾನ್ಯ ಸದಸ್ಯರಾದ ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯತ್ ಖಾನ್ ರವರ ಪರವಾಗಿ ಮತ್ತೊಬ್ಬ ಸದಸ್ಯರಾದ ಎಸ್. ಆರ್. ಮೋರೆಯವರು ಪ್ರಶ್ನೆಯನ್ನು ಕೇಳಬೇಕೆಂದು ಮಾನ್ಯ ಅಧ್ಯಕ್ಷರು ಸೂಚಿಸಿದರು. ಸದಸ್ಯರಾದ ಎಸ್.ಆರ್.ಮೋರೆಯವರು ಈ ಸಮಯದಲ್ಲಿ ಸದನದಲ್ಲಿ ಹಾಜರಿರಲಿಲ್ಲ)

ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 84ರ ಪಾಲಿಕೆಯ ಸ್ವತ್ತಿನ ವಿವರಗಳನ್ನು ಒದಗಿಸುವುದು.

(10) 07. ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮಹಾನಗರ ಪಾಲಿಕೆ 84ನೇ ವಾರ್ಡಿನಲ್ಲಿರುವ ಕೃಷ್ಣಯ್ಯನಪಾಳ್ಯ ಮತ್ತು ಸದಾನಂದ ವಿವರಗಳಲ್ಲಿ ಪ್ರತ್ಯೇಕವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತುಗಳು ಯಾವುವು (ಅಡ್ಡರಸ್ತೆವಾರು, ಮುಖ್ಯ ರಸ್ತೆವಾರು ಖಾಲಿ ನಿವೇಶನಗಳ ಸಂಖ್ಯೆ, ವಿಸ್ತೀರ್ಣ, ನಾಗರೀಕ ಸೌಲಭ್ಯಗಳ ಸ್ವತ್ತಿನವಾರು ವಿವರ ಒದಗಿಸುವುದು);